ರಾಮನನ್ನು, ನಂತರ ಲಕ್ಷ್ಮಣನನ್ನು ನೋಡಿ ಮರುಳಾದದ್ದು, 'ನಿನ್ನ ಕತ್ತಿಗೆ ನನ್ನ ಮೂಗು' ಎನ್ನುತ್ತಾ ಲಕ್ಷ್ಮಣನ ಹತ್ತಿರ ಹತ್ತಿರ ನಿಂತು ಎತ್ತರ ಅಳೆಯುತ್ತಾ, 'ವಿ ಆರ್ ಮೇಡ್ ಫಾರ್ ಈಚ್ ಅದರ್' ಎನ್ನುವಂತೆ ಫೋಸ್ ಕೊಟ್ಟದ್ದು. ಮೊಬೈಲ್ ಇದ್ದಿದ್ದರಂತೂ ಸೆಲ್ಫೀ ತೆಗೆದು ಎಲ್ಲಾ ಕಡೆ ಧಾಂ ಧೂಂ ಸ್ಟೇಟಸ್ಸೇ ಹಾಕಿಬಿಡುತ್ತಿದ್ದಳು. ಅಂದ ಹಾಗೆ, ಶೂರ್ಪನಖಾಳ ಮೂಗು ಕತ್ತರಿಸಿದ ಜಾಗ ಈಗ ನಾಸಿಕ್ ಎಂದೇ ಹೆಸರಿರಿಸಿಕೊಂಡಿದೆಯಲ್ಲ. ಇದೇ ನಾಸಿಕದೊಳಗೆ ಈಗ ಪಂಚವಟಿಯೂ ಇದೆಯಲ್ಲ. ಆದರೂ ಜನ್ನನ ಬದಗನಿಗಿದ್ದಂತೆ ಹಪ್ಪಳಿಕೆಯ ಮೂಗೇನಾದರೂ ಇವಳಿಗೆ ಇದ್ದಿದ್ದರೆ ಪ್ರಕರಣ ಇಷ್ಟೊಂದು ಟ್ವಿಸ್ಟ್ ತೆಗೆದುಕೊಳ್ಳುತ್ತಿರಲಿಲ್ಲ. ಇಲ್ಲಿ ದಶನಾಸಿಕನಾದ ರಾವಣನಿಗೆ ಇದೊಂದು ಮಾಡಬಹುದಿತ್ತು. ತನ್ನೊಂದು ಮೂಗನ್ನು ತನ್ನ ಪ್ರೀತಿಯ ತಂಗಿಗೆ ಕೊಟ್ಟುಪಕರಿಸಿ ಇದಕ್ಕೊಂದು ಸುಖಾಂತ್ಯ ಹಾಡಬಹುದಿತ್ತು. ಸುಖಾಂತ್ಯವಾದರೆ ಕಥಾಂತ್ಯವೂ ಆಗುತ್ತದಲ್ಲ?

ನನ್ನ ಪ್ರಕಾರ ಮೂಗು ಮುಚ್ಚಿ ಓಡಾಡುವುದು ಎನ್ನುವುದೇ ಶುದ್ಧ ಸುಳ್ಳು. ಪೂರ್ತಿ ಮೂಗು ಮುಚ್ಚಿದವರು ಇಲ್ಲಿರುವರೇ? ಆದರೂ ನಮಗೆ ದಕ್ಕದ ವಾಸನೆಗಳು ಎಷ್ಟಿರಬಹುದು? ಅತ್ಯಧಿಕ ವಾಸನೆ ಗ್ರಹಿಸುವವರು ಎಂಬ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ಗಳೇನಾದರು ಇಲ್ಲಿ ಆಗಿವೆಯೇ? ವಾಸನೆ ಇಲ್ಲದಾಗುವ ರೋಗಕ್ಕೆ ಮೂಗಿನ ಸ್ವ್ಯಾಬ್ ಪರೀಕ್ಷೆಯೇ ಆಗಬೇಕು ಎಂದಿರುವುದು ಒಂದು ವ್ಯಂಗ್ಯವಲ್ಲವೇ? ಆರೋಮ ಎಂದರೆ ಮೂಗಿನ ರೋಮಗಳ ಮೂಲಕ ಆರಾಮವಾಗಿ ಒಳಹೋಗುವುದು ಎಂದು ಅರ್ಥವೇ? ಗಂಡಿನತ್ತ ಹೆಣ್ಣು ಆಕರ್ಷಿತಳಾಗಲು ಪರ್‌ಫ್ಯೂಮ್‌ಗಳು ಕಾರಣ ಎಂದು ಜಾಹೀರಾತುಗಳು ತೋರಿಸುತ್ತವೆ. ಇದೇನಾದರೂ ನಿಜ ಆದರೆ ನಗರಗಳ ಜನಸಂದಣಿಯಲ್ಲಿ ಸೆಂಟ್ ಹಾಕಿದ ಒಬ್ಬ ಗಂಡಿನ ಹಿಂದೆ ಎಷ್ಟು ಪರ್ಸೆಂಟ್ ಹೆಣ್ಣುಗಳು ಓಡಬಹುದು? ಆರ್ಯ ದ್ರಾವಿಡ ಥಿಯರಿಯನ್ನು ಪ್ರತಿಪಾದಿಸುವವರ ಪ್ರಕಾರ ಉದ್ದ ಮೂಗಿನವರು ಆರ್ಯರು, ಮೊಂಡು ಮೂಗಿನವರು ದ್ರಾವಿಡರು ಎಂದಾದರೆ ಆರ್ಯರು ತಮ್ಮ ನೀಟಾದ ಮೂಗಿನಿಂದ ಬಿಡುವ ಉಸಿರನ್ನು ನಿಟ್ಟುಸಿರು ಎಂದೂ ದ್ರಾವಿಡರ ಮೋಟು ಮೂಗಿನ ಉಸಿರು ಮೋಟುಸಿರು ಎಂದಾಗಬಹುದೇ? ಮೂಗು ಮಟ್ಟ ಎಂದರೆ ಇನ್ನು ತುಂಬಿಸಲು ಸಾಧ್ಯವಿಲ್ಲದ ಮಟ್ಟ ಎಂದೇ? ಕಣ್ಣು ಸ್ಪೆಕ್ಟೇಟರ್ ಆದರೆ ದಿಕ್ಕನ್ನು ಸೂಚಿಸುವ ಮೂಗು ದಿಕ್ಟೇಟರ್ ಆಗದೆ? ಸಂಸ್ಕೃತದ ನಾಸಿಕದಿಂದ ಇಂಗ್ಲಿಷಿನ ನೋಸ್ ಹುಟ್ಟಿರಬಹುದೇ?... ಹೀಗೆ ಮೂಗಿನಿಂದ ಹುಟ್ಟಿಕೊಂಡ ಉತ್ತರವಿಲ್ಲದ ಕೆಲವು ಮೂಗ ಪ್ರಶ್ನೆಗಳು.



'ಎಲ್ ಎಂಬ ಮನುಷ್ಯ
ಎಸ್ಸ್ ಪರೀಕ್ಷೆಗೆ ಕೂತ
ಮ ಒತ್ತು ಕೊಡಲಿಲ್ಲ
ಸೊನ್ನೆ ಮಾರ್ಕು ತೆಗೆದ
ಅವನ ಅಜ್ಜನ ತಲೆ ಬೋಳು'

ಇದು ಯಾರಿಗಾದರು ನೆನಪಿದ್ದರೆ ಹೇಳಿ. ನಾವು ಬಾಲ್ಯದಲ್ಲಿ ಮನುಷ್ಯನ ಚಿತ್ರ ಬಿಡಿಸಲು ಉಪಯೋಗಿಸುತ್ತಿದ್ದ ಒಂದು ಟ್ರಿಕ್ ಇದು. ಇದರಲ್ಲಿ 'ಎಲ್' ಎಂಬುದು ಮೂಗಾದರೆ 'ಎಸ್' ಕಿವಿ 'ಮ ಒತ್ತು' ಬಾಯಿ 'ಸೊನ್ನೆ' ಕಣ್ಣು. ಹೀಗೆ ಮಾಡಿದರೆ ತಲೆ ಬೋಳಾದ ಚೂಪು ಮೂಗಿನ ಮನುಷ್ಯಾಕೃತಿಯೊಂದು ತಯಾರಾಗುತ್ತಿತ್ತು. ಎಲ್ ಮೂಗಿನ ಮೇಲೊಂದು ಉರುಟು ಕನ್ನಡಕ ಇಟ್ಟರೆ ಸಾಕು ಅದು ರಾಷ್ಟ್ರಪಿತನ ಚಿತ್ರವೂ ಆಗುತ್ತಿತ್ತು.